ಸಿ. ಸಿ. ನಂ.- **92/2021**

ಪಿ.ಡಬ್ಲ್ಯೂ.- **01**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **14-08-2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು- ಆರೋಪಿತರ ಪರ ವಕೀಲರಾದ ಶ್ರೀ ಜಿ ವಿ ಪಿ ರವರಿಂದ-

ಈ ಪ್ರಕರಣದ ಪ್ರಿಲಿಮನಿರಿ ಏನಕ್ವಾರಿಯನ್ನು ನಾನು ಮತ್ತು ಎನ್ ಸೋಮನಾಥ /ಚಾಸಾ 8 ರವರು ಮಾಡಿರುತ್ತೇವೆ. ನಾವು ಈ ರೀತಿ ಪ್ರಥಮ ತನಿಖೆಯನ್ನು ಅಭಿನ್ ಹುಸೇನ್, ಎಜಿಎಂ, ರಿಜನಲ್ ಕಚೇರಿಯವರ ಆದೇಶದ ಮೇರೆಗೆ ಮಾಡಿರುತ್ತೇವೆ. ಸದರಿಯವರು ಲಿಖಿತ ರೂಪದಲ್ಲಿ ಈ ಪ್ರಕರಣದ ಪ್ರಾಥಮಿಕ ತನಿಖೆಯನ್ನು ನಡೆಸಲು ನಮಗೆ ಆದೇಶ ಕೊಟ್ಟಿದ್ದರು ಎಂದರೆ ಸರಿ. ಸದರಿ ಆದೇಶದ ಪ್ರತದಲ್ಲಿ ಯಾವ ವ್ಯಕ್ತಿಯ ವಿರುದ್ದ ತನಿಖೆ ಮಾಡಬೇಕು ಎಂದು ನಮೂದು ಆಗಿತ್ತೇ ಎಂದರೆ ಸಾಕ್ಷಿ ವ್ಯಕ್ತಿಯ ಹೆಸರು ನಮೂದು ಆಗಿರಲಿಲ್ಲ ಆದರೆ ಈ ಪ್ರಕರಣದ ವಾಸ್ತವಾಂಶದ ಬಗ್ಗೆ ಅದರಲ್ಲಿ ನಮೂದು ಇತ್ತು ಎಂದು ನುಡಿಯುತ್ತಾರೆ. ಸದರಿ ಆದೇಶ ಪತ್ರವನ್ನು ನಾನು ಮತ್ತು ಚಾಸಾ 8 ರವರು ಪಡೆದು ಹಿಂಬರಹವನ್ನು ಬರೆದಿರುತ್ತೇವೆ. ಪ್ರಾಥಮಿಕ ತನಿಖೆ ಸಂಪೂರ್ಣ ಆದ ನಂತರ ಅದರ ವರದಿಯನ್ನು ಎಜಿಎಂ, ರಿಜನಲ್ ಕಚೇರಿಗೆ ಸಲ್ಲಿಸಿದೆವು. ಪ್ರಾಥಮಿಕ ತನಿಖೆ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಪರಿಶೀಲಿಸಿ ಅದಕ್ಕೆ ನಿಮ್ಮ ಕೌಂಟರ್ ಸಹಿಯನ್ನು ಮಾಡಿರುತ್ತೀರೆ ಎಂದರೆ ಸಾಕ್ಷಿ ಮೊದಲಿಗೆ ಒಪ್ಪಿ ನಂತರ ಯಾವ ದಾಖಲೆಗಳು ಎಂದು ಕೇಳಿದಾಗ ಆರೋಪಿ ಪರ ವಕೀಲರು ಈ ಪ್ರಕರಣಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳು ಎಂದು ಹೇಳಿದಕ್ಕೆ ಸಾಕ್ಷಿ ಈ ಪ್ರಕರಣಕ್ಕೆ ಸಂಬಂದಪಟ್ಟ ಎಲ್ಲಾ ದಾಖಲೆಗಳ ಬಗ್ಗೆ ಒಂದು ಪಟ್ಟಿ ಬರೆದು ಸದರಿ ಪಟ್ಟಿಗೆ ನಾವು ಸಹಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂದಪಟ್ಟ ದಾಖೆಗಳನ್ನು ಕಲೆಹಾಕುವಾಗ ಅವುಗಳ ಸ್ವಾಧೀನದಲ್ಲಿ ಇರುವ ವ್ಯಕ್ತಿಗೆ ಯಾವುದಾದರು ಮನವಿ ಪತ್ರ ಸಲ್ಲಿಸಿರುತ್ತಿರೇ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇಲ್ಲ ಎಂದು ನುಡಿದು ಸದರಿ ಪ್ರಕರಣಕ್ಕೆ ಸಂಬಂದಪಟ್ಟ ಕೆಲವು ದಾಖಲೆಗಳನ್ನು ಬ್ಯಾಂಕಿನ ವ್ಯವಸ್ಥಾಪಕರಿಂದ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಪ್ರಾಥಮಿಕ ತನಿಖೆಯ ವರದಿಯಲ್ಲಿ ಈ ಮೇಲೆ ಹೇಳಿದಂತೆ ಈ ಪ್ರಕರಣಕ್ಕೆ ಸಂಬಂದಪಟ್ಟ ದಾಖಲೆಗಳನ್ನು ವ್ಯವಸ್ಥಾಪಕರಿಂದ ಪಡೆದುಕೊಂಡಿರುತ್ತೇವೆ ಎಂದು ಬರೆದಿಲ್ಲ. ನಾನು ದೂರು ದಾಖಲಿಸುವಾಗ ಪ್ರಾಥಮಿಕ ತನಿಖೆಯ ವರದಿಯನ್ನು ದೂರಿನ ಜೊತೆ ಲಗತ್ತಿಸಿರುತ್ತೇವೆ ಹಾಗೂ ಈ ರೀತಿ ಸದರಿ ವರದಿಯನ್ನು ದೂರಿನ ಜೊತೆ ಲಗತ್ತಿಸಿರುವ ಬಗ್ಗೆ ದೂರಿನಲ್ಲಿ ನಮೂದು ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಪ್ರಾಥಮಿಕ ತನಿಖೆ ವರದಿ ಹಾಜರುಪಡಿಸಿಲ್ಲ ಎಂದರೆ

ಸಿ. ಸಿ. ನಂ.- **92/2021**

ಪಿ.ಡಬ್ಲ್ಯೂ.- **01**

ಸಾಕ್ಷಿ ನಾನು ಸದರಿ ವರದಿಯನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಗುರುತಿಸಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರಾಥಮಿಕ ತನಿಖೆಯನ್ನು ಸಂಪೂರ್ಣ ಮಾಡಿದ ನಂತರ ನಮ್ಮ ಮೇಲಾಧಿಕಾರಿಗಳು ನಮಗೆ ಯಾವುದೇ ಆದೇಶ ಕೊಟ್ಟಿಲ್ಲ. ಸಾಕ್ಷಿ ನಂತರ ಪೊಲೀಸ್‌ರಿಗೆ ದೂರು ಕೊಡಲು ಮೇಲಾಧಿಕಾರಿ ಅವರಿಗೆ ಒಂದು ಪತ್ರ ಕಳುಹಿಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಪ್ರಾಥಮಿಕ ತನಿಖೆಯನ್ನು ನಾನು ಮತ್ತು ಚಾಸಾ 8 ರವರು ಸಂಪೂರ್ಣಗೊಳಿಸಿ ನಮ್ಮ ಮೇಲಾಧಿಕಾರಿಗೆ ಕೊಟ್ಟ ವರದಿಯನ್ನು ನಮ್ಮ ಮೇಲಾಧಿಕಾರಿ ಪರಿಶೀಲಿಸಿದ ನಂತರ ಸದರಿ ವರದಿಯಲ್ಲಿ ಯಾವುದೇ ಅಪರಾಧ ಆಗಿರುವ ಕುರಿತು ಮಾಹಿತಿ ಕಂಡು ಬರದೆ ಇದ್ದರಿಂದ ಈ ವರದಿಯ ಆಧಾರದ ಮೇಲೆ ಮುಂದಿನ ಕ್ರಮ ಜರುಗಿಸಲು ನಮಗೆ ಯಾವುದೇ ಆದೇಶ ಕೊಡಲಿಲ್ಲ ಎಂದರೆ ಸರಿಯಲ್ಲ. ದೂರನ್ನು ದಾಖಲಿಸಲು ನಮ್ಮ ಮೇಲಾಧಿಕಾರಿ ನಮಗೆ ಲಿಖಿತ ರೂಪದಲ್ಲಿ ಆದೇಶ ಕೊಟ್ಟಿದ್ದರು. ಸದರಿ ಆದೇಶದ ಪ್ರತಿಯನ್ನು ನಾನು ಮತ್ತು ಚಾಸಾ 8 ರವರು ಪಡೆದಿರುತ್ತೇವೆ. ಸದರಿ ಆದೇಶದ ಪತ್ರದಲ್ಲಿ ಯಾವು ವ್ಯಕ್ತಿಯ ವಿರುದ್ಧ ದೂರು ದಾಖಲಿಸಬೇಕು ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಸದರಿ ಆದೇಶ ಪತ್ರವನ್ನು ಸಹ ದೂರಿನಲ್ಲಿ ಲಗತ್ತಿಸಿ ಪೊಲೀಸ್‌ರಿಗೆ ಕೊಟ್ಟಿರುತ್ತೇನೆ.

ಈ ದೂರನ್ನು ದಾಖಲಿಸಲು ನಮಗೆ ಎಜಿಎಂ ರವರು ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ಸಾಮಾನ್ಯವಾಗಿ ಮಿಸ್ ಅಪ್ರಾಪ್ರಿಯೇಷನ್ ಅಪರಾಧದ ವಿರುದ್ಧ ಕ್ರಮ ಜರುಗಿಸಲು ಬ್ಯಾಂಕ್ ನವರು ಠರಾವು ಸಭೆ ನಡೆಸಿ ನಂತರ ಅಧಿಕಾರ ಪತ್ರವನ್ನು ಕೊಡಬೇಕು ಎಂದರೆ ಇದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದಲ್ಲಿ ಸಂಪೂರ್ಣ ತನಿಖೆಯನ್ನು ನಡೆಸಿ ಅದರ ವರದಿಯನ್ನು ನಾವು ನಮ್ಮ ಮೇಲಾಧಿಕಾರಿಗೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಈ ಪ್ರಕರಣದ ಪ್ರಾಥಮಿಕ ತನಿಖೆಯನ್ನು ಮಾತ್ರ ನಡೆಸಲು ನಮಗೆ ಆದೇಶ ಆಗಿತ್ತು ಸಂಪೂರ್ಣ ತನಿಖೆಯನ್ನು ನಡೆಸಲು ನಮಗೆ ಆದೇಶ ಆಗಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಪ್ರಕರಣದ ಸಂಪೂರ್ಣ ತನಿಖೆ ನಡೆಸಿ ಅಂತಿಮ ವರದಿಯನ್ನು ಯಾರು ನಮ್ಮ ಮೇಲಾಧಿಕಾರಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸ್‌ರು ನನ್ನಿಂದ ಈ ಪ್ರಕರಣದ ಸಂಪೂರ್ಣ ತನಿಖೆಯ ಅಂತಿಮ ವರದಿಯನ್ನು ಪಡೆದಿಲ್ಲ.

ಈ ಪ್ರಕರಣದ ಆರೋಪಿ ವಿರುದ್ಧ ದೂರು ದಾಖಲಿಸಲು ನಮ್ಮ ಬ್ಯಾಂಕ್ ನ ಮೇಲಾಧಿಕಾರಿಗಳು ಠರಾವು ಪ್ರತಿಯ ಮುಖಾಂತರ ನಮಗೆ ನೇರವಾಗಿ ಅಧಿಕಾರ ಪತ್ರವನ್ನು

ಕೊಟ್ಟಿರಲಿಲ್ಲ. ಸಾಕ್ಷಿ ಮುಂದುವರೆದು ನಮಗೆ ಪೊಲೀಸ್‌ರಿಗೆ ದೂರು ದಾಖಲಿಸಲು ಮಾತ್ರ ಅಧಿಕಾರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಏನಕ್ವಾಯರಿ ಆಫೀಸರ್ ಹಾಗೂ ಈ ಪ್ರಕರಣದ ದೂರುದಾರ ಎಂದರೆ ಸರಿ. ದೂರನ್ನು ದಾಖಲಿಸಲು ನಮಗೆ ಅಧಿಕಾರ ಪತ್ರವನ್ನು ನಮ್ಮ ಬ್ಯಾಂಕ್ ನ ಹಿರಿಯ ಅಧಿಕಾರಿಗಳು ನೇರವಾಗಿ ಕೊಡದ ಕಾರಣ ಈ ದೂರನ್ನು ದಾಖಲಿಸಲು ನಮಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಮೇಲಾಧಿಕಾರಿಗಳು ನೀಡಿದ ಆದೇಶದ ಪತ್ರದಲ್ಲಿ ದೂರನ್ನು ದಾಖಲಿಸಲು ಅವರಿಗೆ ಅಧಿಕಾರ ಕೊಟ್ಟಿರುತ್ತಾರೆ ಹಾಗೂ ಸದರಿ ಪತ್ರದಲ್ಲಿ ಅವರ ಹೆಸರನ್ನು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ದೂರನ್ನು ದಾಖಲಿಸಲು ನನ್ನ ಮೇಲಾಧಿಕಾರಿಯಾದ ಅಭೀದ್ ಹುಸೇನ್ ರವರಿಗೆ ಯಾರು ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಎಂದು ಗೊತ್ತಿದೆಯೇ ಎಂದರೆ ಸಾಕ್ಷಿ ಡಿಜಿಎಂ ರವರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಅಧಿಕಾರ ಕೊಡುವಾಗ ಕರ್ತವ್ಯದಲ್ಲಿ ಇದ್ದ ಡಿಜಿಎಂ ಯಾರು ಎಂದರೆ ಸಾಕ್ಷಿ ಯೋಚಿಸಿ ಅವರ ಹೆಸರು ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಅಧಿಕಾರ ಪತ್ರ ಅಭೀದ್ ಹುಸೇನ್ ರವರಿಗೆ ಮುಟ್ಟಿದೆಯೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಆದರೆ ಸಾಮಾನ್ಯವಾಗಿ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅಭೀದ್ ಹುಸೇನ್ ರವರು ದೂರು ನೀಡಲು ನಮಗೆ ನೀಡಿದ ಅಧಿಕಾರ ಪತ್ರದಲ್ಲಿ ಅವರ ಮೇಲಾಧಿಕಾರಿಯಾದ ಡಿಜಿಎಂ ರವರು ಅವರಿಗೆ ಅಧಿಕಾರ ಪತ್ರ ಕೊಟ್ಟಿರುವ ಬಗ್ಗೆ ನಮೂದು ಮಾಡಿಲ್ಲ. ಅಭೀದ್ ಹುಸೇನ್ ರವರಿಗೆ ಡಿಜಿಎಂ ರವರಿಂದ ಕೊಟ್ಟ ಅಧಿಕಾರ ಪತ್ರವನ್ನು ನಾನು ಪೊಲೀಸ್‌ರಿಗೆ ಕೊಟ್ಟಿಲ್ಲ ಹಾಗೂ ಪೊಲೀಸ್‌ರು ಈ ದಾಖಲೆಯನ್ನು ಕಲೆಹಾಕಿಲ್ಲ ಎಂದರೆ ಸರಿ.

ಎನ್.ಸಿ ಕಾಲೋನಿಯಲ್ಲಿರುವ ನಮ್ಮ ಬ್ಯಾಂಕ್ ನ ಶಾಖೆಯಲ್ಲಿ ಹಣದ ಅವ್ಯವಹಾರ ಆಗಿರುವ ಕುರಿತು ಯಾವುದಾದರು ಗ್ರಾಹಕರು ಪೊಲೀಸ್‌ರಿಗೆ ದೂರು ಕೊಟ್ಟಿರುತ್ತಾರೆಯೆ ಎಂದರೆ ಸಾಕ್ಷಿ ಛಾಯಾ ಎನ್ನುವ ಗ್ರಾಹಕರು ನಾವು ಪ್ರಾಥಮಿಕ ತನಿಖೆಯನ್ನು ನಡೆಸುವ ಸಮಯದಲ್ಲಿ ಪೊಲೀಸ್‌ರಿಗೆ ನಮ್ಮ ಈ ಮೇಲೆ ಹೇಳಿದ ಬ್ಯಾಂಕ್ ನ ಶಾಖೆಯಲ್ಲಿ ಹಣದ ಅವ್ಯವಹಾರ ಅಗಿರುವ ಕುರಿತು ದೂರು ನೀಡಿರುತ್ತಾರೆ. ಛಾಯಾರವರು ಕೊಟ್ಟ ದೂರಿನ ಆಧಾರದ ಮೇಲೆ ಪೊಲೀಸ್‌ರು ತನಿಖೆ ನಡೆಸಿರುತ್ತಾರೆಯೆ ಎಂದರೆ ಸಾಕ್ಷಿ ಛಾಯಾರವರು ಕೊಟ್ಟ ದೂರಿನ ಆಧಾರದ ಮೇಲೆ ತನಿಖೆ ನಡೆಸಿಲ್ಲ ಆದರೆ ಅವರು ಕೊಟ್ಟ ದೂರಿನ ಮೇಲೆ ತನಿಖೆ ನಡೆಸಿರುತ್ತಾರೆ ಎಂದು ನುಡಿಯುತ್ತಾರೆ.

ಸಿ. ಸಿ. ನಂ.- **92/2021**

ಪಿ.ಡಬ್ಲ್ಯೂ.- **01**

ಛಾಯಾರವರು ನೀಡಿದ ದೂರಿನ ಆಧಾರದ ಮೇಲೆ ಠಾಣೆಯಲ್ಲಿ ಗುನ್ನೆ ದಾಖಲಾಗಿದೆ ಎಂದರೆ ಸಾಕ್ಷಿ ಛಾಯಾರವರು ಠಾಣೆಗೆ ದೂರು ಕೊಟ್ಟಿಲ್ಲ, ನಮಗೆ ದೂರನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಾಥಮಿಕ ತನಿಖೆಯನ್ನು ಸಂಪೂರ್ಣಗೊಳಿಸುವ ಮುಂಚೆ ಯಾವುದೇ ಗ್ರಾಹಕರು ನಮಗಾಗಲಿ ಅಥವಾ ಪೊಲೀಸ್ ಠಾಣೆಗೆ ಆಗಲಿ ದೂರನ್ನು ಕೊಟ್ಟಿಲ್ಲ ಎಂದರೆ ಸರಿ.

(ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀ ಸವಾಲಿಗೆ ಸಮಯಾವಕಾಶವನ್ನು ಕೋರಿದ್ದು, ಅನುಮತಿಸಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಹೊಸಪೇಟೆ.